**◆ ಕಟ್ಟೈಕೂತ್ತು ಎಂಬ ಕಲಾಪ್ರಕಾರದ ಏಳಿಗೆಗಾಗಿ ನಿಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದೀರಿ. ನಿಮ್ಮ ಮತ್ತು ಈ ಕಲಾಪ್ರಕಾರದ ಭೇಟಿ ಯಾವಾಗ ಆಯಿತು?**

ನನ್ನ ಅಪ್ಪ ಕಟ್ಟೈಕೂತ್ತು ಕಲಾವಿದರಾಗಿದ್ದರು. ನನ್ನ ಬಾಲ್ಯವೆಂದರೆ, ಅಲ್ಲಿ ಕಟ್ಟೈಕೂತ್ತು ಕಲೆಯ ಹೊರತಾಗಿ ಹೆಚ್ಚಿನ ನೆನಪುಗಳೇನೂ ಇಲ್ಲ. ನಾನು ಹತ್ತು ವರ್ಷದವನಿದ್ದಾಗ ನಮ್ಮೂರು ಕಾಂಚೀಪುರಂ ಪೆರುಂಗತ್ತೂರಿನಲ್ಲಿ ಒಂದು ಕಟ್ಟೈಕೂತ್ತು ಪ್ರದರ್ಶನ ನಡೆಯಿತು. ಬಹುಶಃ ಆ ಪ್ರದರ್ಶನದ ತಂಡವು ನನ್ನ ಅಪ್ಪನದ್ದೇ ಇರಬೇಕು. ಆ ಪ್ರದರ್ಶನ ನನಗೆ ಬಹಳ ಇಷ್ಟವಾಯಿತು. ಪ್ರದರ್ಶನದ ನಂತರ ನಾನು ಮನೆಯಲ್ಲಿ ಅದನ್ನೇ ಅನುಸರಿಸಲು ಶುರು ಮಾಡಿದೆ. ಕುಂತಲ್ಲಿ ನಿಂತಲ್ಲಿ ವೇಷಗಳ ಹೆಜ್ಜೆಗಾರಿಕೆಯನ್ನು ನೆನಪಿಸಿಕೊಂಡು ಹಾಗೆಯೇ ಕುಣಿಯುತ್ತಿದ್ದೆ. ಇದನ್ನು ನೋಡಿದ ನನ್ನ ಅಪ್ಪನಿಗೆ ಸ್ವಲ್ಪ ಸಿಟ್ಟುಬಂದಿರಬೇಕು. 'ಹೀಗೆ ಮನೆಯಲ್ಲಿ ಸುಮ್ಮನೇ ಲಾಗ ಹೊಡೆದು ಕಲೆಯನ್ನು ಅನುಸರಿಸುವುದಕ್ಕಿಂತ ಶಾಲೆಗೆ ಹೋಗಿ ಚೆನ್ನಾಗಿ ಓದ್ಕೋಬಾರದಾ' ಎಂದು ಗದರಿಸಿದರು. ಆದರೆ ನನಗೆ ಓದು-ಬರಹ ಕಲಿಯುವುದಕ್ಕಿಂತ ನೃತ್ಯವೇ ಇಷ್ಟವಾಗುತ್ತಿತ್ತು. ಶಾಲೆಯಲ್ಲಿ ಔಪಚಾರಿಕವಾಗಿ ಓದು-ಬರಹ ಕಲಿಯುವ ಪ್ರಕ್ರಿಯೆಯ ಮೇಲಿನ ಒಲವು ಕಡಿಮೆಯಾಗುತ್ತ ಬಂತು. ಅಪ್ಪನಿಗೆ ಕಟ್ಟೈಕೂತ್ತು ಬಗ್ಗೆ ಅಭಿಮಾನವಿತ್ತು. ನಾನು ಆ ದಾರಿಯನ್ನು ಹಿಡಿದರೆ ಅವರಿಗೆ ಸಂತೋಷವಾಗುತ್ತಿತ್ತು. ಅವರು ನನ್ನ ನಟನೆಯನ್ನು ಇಷ್ಟಪಡುತ್ತಿದ್ದರು ಕೂಡ. ಆದರೆ ನಾನು ಅದರಲ್ಲಿಯೇ ಮುಂದುವರೆದರೆ ಮುಂದಕ್ಕೆ ಜೀವನ ಹೇಗೆ ನಿಭಾಯಿಸುವೆನೋ ಎಂದು ಆತಂಕಪಡುತ್ತಿದ್ದರು. ಹಾಗಾಗಿ ಶಾಲೆಗೆ ಹೋಗುವುದೇ ಉತ್ತಮ ಎಂದು, 'ಪ್ರದರ್ಶನಕ್ಕೆಲ್ಲ ಬರಬೇಡ' ಎಂದು ನನ್ನನ್ನು ದೂರ ಇಡುತ್ತಿದ್ದರು. ಅಪ್ಪನ ಮನದ ಇಂಗಿತ ನನಗೆ ಬಹಳ ತಡವಾಗಿ ಅರ್ಥವಾಯಿತು. ಆದರೆ ಅಷ್ಟರಲ್ಲಿ ನಾನು ಕಲಾಪ್ರಕಾರಕ್ಕೆ ಧುಮುಕಿಯಾಗಿತ್ತು. ನಾನು ಶಾಲೆಗೆ ಹೋಗುವುದನ್ನು ನಿಲ್ಲಿಸಿ, ಕಲಾವಿದನೇ ಆಗುತ್ತೇನೆ ಎಂದು ಅಪ್ಪನ ಬೆನ್ನುಬಿದ್ದಾಗ ಅವರು ನನ್ನನ್ನು ಮುಕ್ತ ಮನಸ್ಸಿನಿಂದ ಪ್ರೋತ್ಸಾಹಿಸಲಿಲ್ಲ. ನಾನು ಅಪ್ಪನ ತಂಡದ ಜೊತೆಗೇ ಅವರ ಸಾಮಾನು ಸರಂಜಾಮುಗಳನ್ನು ಹಿಡಿದುಕೊಂಡು ಅವರೊಡನೆಯೇ ಪ್ರದರ್ಶನಗಳಿಗೆ ಒಂದೆಡೆಯಿಂದ ಮತ್ತೊಂದೆಡೆಗೆ ನಡೆಯಲು ಶುರು ಮಾಡಿದೆ. ಅಂತಹ ನಡಿಗೆಯೇ ಪಾಠಶಾಲೆ ಕೂಡ ಹೌದು. ರಾತ್ರಿ ಇಡೀ ನಡೆಯುವ ಪ್ರದರ್ಶನಗಳಿಗೆ ಸಂಬಂಧಿಸಿದ ಹಾಡುಗಳ ಅಭ್ಯಾಸ, ನಾಟ್ಯದ ವರಸೆಗಳ ಅಭ್ಯಾಸಗಳು, ಪೌರಾಣಿಕ ಕಥೆಗಳ ಚರ್ಚೆಗಳೆಲ್ಲ ಈ ಪ್ರಯಾಣದಲ್ಲಿಯೇ ನಡೆಯುತ್ತಿದ್ದವು. ಅದೊಂದು ಸಂಚಾರಿ ಶಾಲೆ ಎಂದರೆ ಸರಿ. ಹೀಗೆ ತಂಡದಲ್ಲಿದ್ದಾಗ ಯಾವಾಗಾದರೂ ನಾನು ಕಟ್ಟೈಕೂತ್ತು ಪ್ರದರ್ಶನದಲ್ಲಿ ಚಿಕ್ಕಪುಟ್ಟ ಪಾತ್ರಗಳನ್ನು ಮಾಡಿದಾಗ ಅಪ್ಪ ಆಗೀಗ ಹೊಗಳುತ್ತಿದ್ದರು. ಅವರ ಪ್ರೋತ್ಸಾಹ ಪರೋಕ್ಷವಾಗಿತ್ತು. ಹಾಗೆ ನೋಡಿದರೆ ಅಪ್ಪನೇ ನನ್ನ ಮೊದಲ ಗುರು. ಇಡೀ ತಂಡದಲ್ಲಿ ಅವರೇ ಮುಖ್ಯಕಲಾವಿದರೂ ಆಗಿದ್ದರು. ಯಜಮಾನರೂ ಆಗಿದ್ದರು. ಅವರ ಜ್ಞಾನಭಂಡಾರ ಅದ್ಭುತವಾಗಿತ್ತು. ಪ್ರತಿದಿನವೂ ಅವರು ಪ್ರದರ್ಶನವನ್ನು ವಿಭಿನ್ನವಾಗಿ ನಿರೂಪಿಸುತ್ತಿದ್ದರು.

**◆ ಪ್ರೋತ್ಸಾಹ ಇಲ್ಲದೇ ಇದ್ದರೂ ಕಲೆಯ ವರಸೆಯನ್ನು ಅರಗಿಸಿಕೊಳ್ಳುವಲ್ಲಿ ಹೇಗೆ ಯಶಸ್ವಿಯಾದಿರಿ?**

ನಾನೇನೂ ಔಪಚಾರಿಕವಾಗಿ ಗುರುಕುಲಕ್ಕೆ ತೆರಳಿ ಕಟ್ಟೈಕೂತ್ತು ಕಲಿಯಲಿಲ್ಲ. ಉತ್ತರ ತಮಿಳುನಾಡಿನ ಪ್ರದೇಶಗಳಲ್ಲಿ 'ತೆರುಕೂತ್ತು' ಎಂಬ ಆಟವಿದೆ. ಅಂದರೆ ಬೀದಿಯಲ್ಲಿಯೇ ಪೌರಾಣಿಕ ಕಥೆಗಳ ಚಿಕ್ಕಪುಟ್ಟ ಪ್ರದರ್ಶನ ನೀಡುವುದು. ನಾನು ಅದರಲ್ಲಿ ಅನೇಕ ಬಾರಿ ಭಾಗವಹಿಸುತ್ತಿದ್ದೆ. ಇದೊಂದು ರೀತಿಯಲ್ಲಿ ಕಟ್ಟೈಕೂತ್ತು ಪ್ರದರ್ಶನಕ್ಕೆ ಪೂರಕವಾದ ಕಲೆ. ಕಟ್ಟೈಕೂತ್ತುಗಿಂತಲೂ ತುಸು ಒರಟಾಗಿ ಪ್ರದರ್ಶನಗೊಳ್ಳುತ್ತದೆ. ಆಗೆಲ್ಲ ಮಾರಿಯಮ್ಮ ಜಾತ್ರೆಯಲ್ಲಿ ಜನರನ್ನು ರಂಜಿಸುವ ಉದ್ದೇಶದಿಂದ, ಪೌರಾಣಿಕ, ನೀತಿಕಥೆಗಳ ಅಭಿರುಚಿಯನ್ನು ಜನರಲ್ಲಿ ಮೂಡಿಸುವ ದೃಷ್ಟಿಯಿಂದ 'ತೆರುಕೂತ್ತು' ಆಡುತ್ತಿದ್ದರು. ಅದರಲ್ಲಿ ನಾನೂ ಭಾಗವಹಿಸುತ್ತಿದ್ದೆ. 'ಕಟ್ಟೈಕೂತ್ತು ಪ್ರದರ್ಶನದಲ್ಲಿ ಹಿರಿಯ ಮತ್ತು ಪ್ರಬುದ್ಧ ಕಲಾವಿದರು ಪ್ರದರ್ಶನ ನೀಡುತ್ತಿದ್ದ ರೀತಿಯನ್ನು, ಅವರ ಹಾಡುಗಾರಿಕೆಯನ್ನು ಎಚ್ಚರಿಕೆಯಿಂದ ಗಮನಿಸಿ, ಸ್ವಲ್ಪ ನೀನೂ ಕಲಿತುಕೊ.